ಕುಟುಂಬದ ಮೇಲೆ ಅವಲಂಬಿತರಾಗಿರುತ್ತಾರೆ. ಆದರೆ ಎಷ್ಟೋ ಸಲ ಅವರು ಇಂಡಿಪೆಂಡೆಂಟ್ ಆಗಿರುತ್ತಾರೆ; ಆದರೂ 'ಅಮ್ಮನನ್ನು ಕೇಳಿ ಬರಬೇಕು', 'ಅಪ್ಪ ಬೇಡ ಅಂದ್ಬಿಟ್ರು', 'ನಂಗೆ ಬೇಗ ಬರೋಕೆ ಹೇಳಿದಾರೆ', 'ಆರು ಗಂಟೆಗೆ ಮೊದಲೇ ನಾನು ಮನೆಗೆ ಹೋಗ್ಬೇಕು' ಹೀಗೆಲ್ಲ ಹೇಳುವುದನ್ನು ನನಗಂತೂ ಅರಗಿಸಿಕೊಳ್ಳೋಕೆ ಆಗಲ್ಲ. ಸ್ಟುಪಿಡ್ ಅನಿಸುತ್ತದೆ. ಆದರೆ ಅವರ ಮನೆಯಲ್ಲಿ ಬಟ್ಟೆಗಳ ಮೇಲೆ, ವರ್ತನೆಗಳ ಮೇಲೆ ಇರುವ ನಿರ್ಬಂಧಗಳ ಕುರಿತು ನಾನು ಟೀಕೆ ಮಾಡಕ್ಕೆ ಆಗಲ್ಲ. ಅದು ಅವರ ವೈಯಕ್ತಿಕ ಬದುಕು.

ಆದರೆ, ನಾನು ಏನು ಬಟ್ಟೆ ಹಾಕಬೇಕು, ಏನು ತಿನ್ನಬೇಕು, ಯಾರನ್ನು ಪ್ರೀತಿ ಮಾಡಬೇಕು... ಇವೆಲ್ಲವೂ ತುಂಬ ವೈಯಕ್ತಿಕವಾದದ್ದು. ನಾನು ಹುಡುಗನನ್ನು ಪ್ರೀತಿಸಬಹುದು, ಹುಡುಗಿಯನ್ನೇ ಪ್ರೀತಿಸಬಹುದು, ಅದನ್ನು ಪ್ರಶ್ನಿಸುವ ಅಧಿಕಾರ ಯಾರೆಂದರೆ ಯಾರಿಗೂ ಇಲ್ಲ. ನಾನು ಯಾವುದೇ ಜಾತಿ ಇರಲಿ, ಯಾವುದೇ ದಿನ ಇರಲಿ, ಏನು ಬೇಕಾದರೂ ತಿಂತೀನಿ. ನನ್ನನ್ನು ತಡೆಯುವ ಅಧಿಕಾರ ಈ ಜಗತ್ತಿನ ಯಾರಿಗೂ ಇಲ್ಲ. ಹಾಗೆಯೇ ಯಾವ ಬಟ್ಟೆ ಹಾಕ್ಕೋಬೇಕು, ಹೇಗೆ ಕಾಣಿಸಿಕೊಳ್ಳಬೇಕು ಎಂಬುದನ್ನು ನಿರ್ಧರಿಸುವ ಹಕ್ಕನ್ನು ನಾನು ನನ್ನ ಕುಟುಂಬದವರಿಗಾಗಲಿ, ನೆರೆಹೊರೆಯವರಿಗಾಗಲಿ ಕೊಟ್ಟಿಲ್ಲ. ಅದು ನನ್ನಿಷ್ಟ.

ಈ ಮನಸ್ಥಿತಿಯನ್ನು ಎಲ್ಲ ಹೆಣ್ಣುಮಕ್ಕಳೂ ಬೆಳೆಸಿಕೊಳ್ಳಬೇಕು. ಇಲ್ಲಾಂದ್ರೆ ಬೇರೆಯವರೇ ನಮ್ಮ ಬದುಕನ್ನು ಸಂಪೂರ್ಣವಾಗಿ ನಿಯಂತ್ರಿಸಿಬಿಡುತ್ತಾರೆ.

◆ **ಮಾಡರ್ನಿಸಮ್ ಎನ್ನುವುದು ವ್ಯಕ್ತಿಸ್ವಾತಂತ್ರ್ಯದ ವೇದಿಕೆ ಎಂಬ ನಂಬಿಕೆ ನಮ್ಮಲ್ಲಿದೆ. ಆದರೆ ಆಧುನಿಕತೆ ನಿಜವಾಗಿಯೂ ಹೆಣ್ಣಿಗೆ ಸ್ವಾತಂತ್ರ್ಯ ಕೊಟ್ಟಿದೆ ಅನಿಸುತ್ತದಾ ಅಥವಾ ಹೊಸ ಪರಿವೇಷಗಳಲ್ಲಿ ಹಳೆಯ ಸಂಕೋಲೆಗಳೇ ಅವಳನ್ನು ಕಟ್ಟಿಹಾಕುತ್ತಿವೆಯಾ?**

ಆಧುನಿಕತೆ ಎನ್ನುವುದು ಜೀವನಶೈಲಿಗೆ ಸಂಬಂಧಿಸಿದ್ದಲ್ಲ. ಅದು ಆಲೋಚನೆಗಳಿಗೆ ಸಂಬಂಧಿಸಿದ್ದು. ಪ್ರಗತಿಪರ ಆಲೋಚನೆಗಳಿಗೆ ಸಂಬಂಧಿಸಿದ್ದು. ನನ್ನ ಅಮ್ಮಮ್ಮ (ಅಜ್ಜಿ) 1930ರಲ್ಲಿ ಹುಟ್ಟಿದವರು. ಈಗ ಅವರಿಲ್ಲ. ಹದಿನಾರು ಹದಿನೇಳು ವರ್ಷಕ್ಕೇ ಮದುವೆಯಾದರು. ಆದರೆ ಅವರು ಎಷ್ಟು ಮಾಡರ್ನ್ ಆಗಿ ಬದುಕಿದ್ದರು ಎಂದು ಯೋಚಿಸಿದರೆ ಆಶ್ಚರ್ಯವಾಗುತ್ತದೆ.

ಹೆಣ್ಣುಮಕ್ಕಳು ಮುಟ್ಟಾಗುತ್ತಾರಲ್ಲಾ, ಆಗ ಅಡುಗೆ ಮನೆಗೆ ಹೋಗುವ ಹಾಗಿಲ್ಲ. ದೇವರ ಮನೆಗೆ ಹೋಗುವ ಹಾಗಿಲ್ಲ. ದೇವಸ್ಥಾನಕ್ಕೆ ಹೋಗುವ ಹಾಗಿಲ್ಲ. ಹೀಗೆ ಹಲವು ನಿರ್ಬಂಧಗಳು ಇರುತ್ತಿದ್ದವು. ಈಗಲೂ ಅವು ಇವೆ. ಆದರೆ ನಮ್ಮ ಅಮ್ಮಮ್ಮ ಆ ಕಾಲದಲ್ಲಿಯೇ 'ಇದೆಲ್ಲ ಹಳೆಯ ಕಾಲದ ನಂಬಿಕೆ. ನೀವು ಅದನ್ನೆಲ್ಲ ನಂಬಲಿಕ್ಕೆ ಹೋಗಬೇಡಿ' ಎಂದು ಹೇಳುತ್ತಿದ್ದರಂತೆ. ಅವರೇನೂ ಪದವೀಧರೆ ಅಲ್ಲ, ಆದರೆ ಅವರ ಆಲೋಚನೆ ಎಷ್ಟು ಆಧುನಿಕವಾಗಿತ್ತು, ಪ್ರಗತಿಪರವಾಗಿತ್ತು ನೋಡಿ. ರಾತ್ರಿ ಹೊತ್ತು ಉಗುರು ಕತ್ತರಿಸಿದರೆ ದೌರ್ಭಾಗ್ಯ ಬರತ್ತದೆ ಎಂಬ ನಂಬಿಕೆ ಇದೆಯಲ್ಲ. ಅದರ ಕುರಿತೂ ಅವರು 'ಹಳೆಯ ಕಾಲದಲ್ಲಿ ಬೆಳಕು ಇರುತ್ತಿರಲಿಲ್ಲ. ಹಾಗಾಗಿ ಉಗುರು ಕತ್ತರಿಸುವಾಗ ಬೆರಳು ಕತ್ತರಿಸಿಹೋಗಬಹುದೇನೋ ಎಂಬ ಕಾರಣಕ್ಕೆ ಅಂಥದ್ದೊಂದು ನಂಬಿಕೆ ಹುಟ್ಟುಹಾಕಿದ್ದರು. ಆದರೆ ಈಗ ನೂರು ವೋಲ್ಟ್ ಬಲ್ಬ್ ಇದ್ಯಲ್ಲ. ಯಾಕೆ ಉಗುರು ಕತ್ತರಿಸಿಕೊಳ್ಳಬಾರದು?' ಎಂದು ಪ್ರಶ್ನಿಸುತ್ತಿದ್ದರು. ಅವರು ಯಾವಾಗಲೂ ಹಳೆಯ ಆಲೋಚನೆಗಳನ್ನು ನಂಬಿಕೆಗಳನ್ನು ಹೀಗೆಯೇ ಪ್ರಶ್ನಿಸುತ್ತಿದ್ದರು. ಅವರು ನನ್ನ ದೊಡ್ಡ ಸ್ಫೂರ್ತಿ.



ನನ್ನಮ್ಮ ಬೆಳೆದಿದ್ದು ಸ್ವಲ್ಪ ಸಾಂಪ್ರದಾಯಿಕ ಮನೆತನದಲ್ಲಿ. ನಾನು ಹುಟ್ಟಿದಾಗ ಅವರಿಗೆ ಎರಡು ಆಯ್ಕೆಗಳು ಇದ್ದವು. ಒಂದು, ಅವರು ಬೆಳೆದ ರೀತಿಯಲ್ಲಿಯೇ ಸಾಂಪ್ರದಾಯಿಕ ನಿರ್ಬಂಧಗಳಲ್ಲಿಯೇ ಬೆಳೆಸುವುದು; ಇನ್ನೊಂದು, ಅದಕ್ಕೆ ವಿರುದ್ಧವಾಗಿ ಅವರಿಗೆ ಸ್ವಾತಂತ್ರ್ಯ ನೀಡಿ ಸ್ವಾವಲಂಬಿಗಳಾಗಿ ಬೆಳೆಸುವುದು. ಅವಳು ಎರಡನೇ ಆಯ್ಕೆ ಆಯ್ದುಕೊಂಡಳು. ಎಲ್ಲ ಪೋಷಕರಿಗೆ, ಅಮ್ಮಂದಿರಿಗೆ ಈ ಆಯ್ಕೆಗಳಿರುತ್ತವೆ. ಅದರಲ್ಲಿ ಯಾವುದನ್ನು ಆಯ್ದುಕೊಳ್ಳುತ್ತಾರೆ ಎನ್ನುವುದು ಮಕ್ಕಳ ವ್ಯಕ್ತಿತ್ವವನ್ನು, ಬದುಕನ್ನು ರೂಪಿಸುತ್ತದೆ.

◆ **ಇಂದು ಇಡೀ ಸಮಾಜದಲ್ಲಿ ಬೌದ್ಧಿಕತೆಯನ್ನು, ಬುದ್ಧಿಜೀವಿಗಳನ್ನು ದ್ವೇಷಿಸುವ, ಅವರು ನಮ್ಮ ಸಮಾಜಕ್ಕೆ ಬೇಕಾಗಿಲ್ಲ ಎಂಬ ಮನೋಭಾವ ವ್ಯಾಪಕವಾಗುತ್ತಿದೆಯಲ್ಲವೇ? ಈ ಕುರಿತು ನಿಮ್ಮ ಅಭಿಪ್ರಾಯ ಏನು?**

ಹಿಂದಿನ ಕಾಲದಲ್ಲಿ ಚಿಂತಕರಿಗೆ ಸಾಕಷ್ಟು ಮಹತ್ವ ಇತ್ತು. ತತ್ವಜ್ಞಾನಿಗಳ, ವಿಷಯತಜ್ಞರ ಮಾತಿಗೆ ಸಮಾಜದಲ್ಲಿ ಸಾಕಷ್ಟು ಬೆಲೆ ಇತ್ತು. ಈಗ ನಮಗೆ ಹುಟ್ಟಿನಿಂದಲೇ ಬದುಕು ಸುಲಭವಾಗಿಬಿಟ್ಟಿದೆ. ಅಂದರೆ ಸೆಟ್ ಆಗಿಬಿಟ್ಟಿದೆ. ಹಾಗಾಗಿ ನಾವು ಯೋಚಿಸುವುದನ್ನೇ ನಿಲ್ಲಿಸಿಬಿಟ್ಟಿದ್ದೇವೆ. ಯಾರಾದ್ರೂ ಯಾವುದಾದರೂ ವಿಷಯದ ಬಗ್ಗೆ ಸ್ವಲ್ಪ ಜಾಸ್ತಿ ಯೋಚಿಸುತ್ತಾರೆ, ಮಾತನಾಡುತ್ತಾರೆ ಎಂದಾಕ್ಷಣ ಅವರನ್ನು 'ಬುದ್ಧಿಜೀವಿ' ಎಂದು ಹಣೆಪಟ್ಟಿ ಹಚ್ಚಿ ಬ್ಯಾನ್ ಮಾಡಿಬಿಡುತ್ತೇವೆ. ಅವರನ್ನು ಟಾರ್ಗೆಟ್ ಮಾಡಿ ಬುದ್ಧಿಜೀವಿಗಳನ್ನು ಬೈಗುಳ ಎನ್ನುವ ರೀತಿ ಬಳಸುತ್ತಿದ್ದೇವೆ.

ಅಂತರ್ಜಾಲ, ಸೋಷಿಯಲ್ ಮೀಡಿಯ ಇವೆಲ್ಲ ಒಳ್ಳೆಯ ವೇದಿಕೆಗಳು. ಆದರೆ ಇವುಗಳಿಂದ ಕೆಟ್ಟದ್ದೂ ಅಷ್ಟೇ ಆಗುತ್ತಿದೆ. ಮನುಷ್ಯ ಮನುಷ್ಯರ ನಡುವಿನ ದ್ವೇಷ ಇದೆಯಲ್ಲ, ಅದು ಜಾಸ್ತಿಯಾಗಿದೆ. ಬಾಯಿಗೆ ಬಂದಹಾಗೆಯೇ ಟೈಪ್ ಮಾಡಿ ಕಮೆಂಟ್ ಮಾಡ್ತಾರೆ. ಇಂಟರ್‌ನೆಟ್ ಎನ್ನುವುದು ಮೂರ್ಖರ ಆಟದ ಮೈದಾನವಾಗಿಬಿಟ್ಟಿದೆ.

ಏನೋ ಟ್ವೀಟ್ ಮಾಡಿದರೆ ಸಾಕು 'ಓ.. ಬಂದ್ಬಿಟ್ಳು. ಫೆಮಿನಿಸ್ಟ್' ಅನ್ನಲು ಶುರುಮಾಡ್ತಾರೆ. 'ಪ್ರತಿಯೊಬ್ಬ ಗಂಡಸೂ ಕೆಟ್ಟವರಾಗಿರ್ತಾರಾ?' ಎನ್ನಲು ಶುರುಮಾಡ್ತಾರೆ. ಅವರಿಗೆ ಫೆಮಿನಿಸ್ಟ್ ಶಬ್ದದ ಅರ್ಥ ಗೊತ್ತಿಲ್ಲ. ನಾನು ಯಾವ ಉದ್ದೇಶದಿಂದ ಟ್ವೀಟ್ ಮಾಡಿದ್ದೀನಿ ಗೊತ್ತಿಲ್ಲ. ಒಬ್ಬಳು ಹೆಣ್ಣುಮಗಳು ಯೋಚಿಸುತ್ತಾಳೆ, ತನ್ನ ಅಭಿಪ್ರಾಯಗಳನ್ನು ಹೇಳಿಕೊಳ್ಳುತ್ತಾಳೆ ಎನ್ನುವುದೇ ಅವರಿಗೆ ಸಹಿಸಲಿಕ್ಕೆ ಅಸಾಧ್ಯವಾಗಿ ಕಾಣಿಸುತ್ತದೆ.

ಈಗ ಆರೋಗ್ಯಕರ ಸಂವಾದಕ್ಕೆ ವೇದಿಕೆಗಳೇ ಇಲ್ಲ. ಲೆಫ್ಟಿಸ್ಟ್, ರೈಟಿಸ್ಟ್, ಫೆಮಿನಿಸ್ಟ್, ನಮ್ಮ ದೇಶ ಬಿಟ್ಟಿಡಿ... ಹೀಗೆ ದ್ವೇಷಮಯ ಎರಚಾಟಗಳೇ ಎಲ್ಲ. ತುಂಬ ವಿಚಿತ್ರವೆನಿಸುತ್ತದೆ ಇದು. 'ಎಲ್ಲ ಮನುಷ್ಯನೊಳಗೂ ಒಬ್ಬ ಕ್ರೂರ ಪ್ರಾಣಿ ಇರುತ್ತದೆ. ಅವಕಾಶ ಸಿಕ್ಕಾಗ ಹೊರಗೆ ಬರುತ್ತದೆ' ಎಂಬ ಮಾತಿದೆಯಲ್ಲವೇ? ಇಂಟರ್‌ನೆಟ್ ಮನುಷ್ಯನೊಳಗಿನ ಆ ಪ್ರಾಣಿಗಳು ಹೊರಗೆ ಬರಲು ಅವಕಾಶ ಕೊಟ್ಟಿದೆ. ಮುಖ ಮರೆಸಿಕೊಂಡು ಮಾತನಾಡುವುದು ತುಂಬ ಸುಲಭ. ಅನಾಮಿಕತೆಯಲ್ಲಿಯಷ್ಟೇ ಹುಟ್ಟಿಕೊಳ್ಳುವ ಕ್ರೌರ್ಯ ಅದು. ವಾಸ್ತವ ಜಗತ್ತಿನಲ್ಲಿ ಯಾರೂ ಹಾಗಿರುವುದಿಲ್ಲ. ನನ್ನನ್ನು ಟ್ವಿಟರ್‌ನಲ್ಲಿ ಬೈಯುವ ಎಷ್ಟೋ ಜನರಿಗೆ ನನ್ನ ಮುಖದೆದುರು ಬಂದು ಹೇಳುವ ಧೈರ್ಯ ಇಲ್ಲ. ವರ್ಚುವಲ್ ಜಗತ್ತು ಸೃಷ್ಟಿಸಿರುವ ವಿಕೃತಿ ಅದು. ■